## ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ
## ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು 01

ಸಂಖ್ಯೆ: ಸಶಿಅ/ಎಸ್.ಎಫ್.ಡಿ/ಸುತ್ತೋಲೆ/2010–11 ದಿನಾಂಕ: 27.05.2010

# ಸುತ್ತೋಲೆ

ವಿಷಯ: ವಿಶೇಷ ಆದ್ಯತಾ ಜಿಲ್ಲೆಗಳ ಪ್ರಗತಿ ಸಲ್ಲಿಸುವ ಬಗ್ಗೆ.

**********

ನಮ್ಮ ರಾಜ್ಯದಲ್ಲಿ 3 ಜಿಲ್ಲೆಗಳನ್ನು ಅಲ್ಪ ಸಂಖ್ಯಾತ ಜಿಲ್ಲೆಗಳೆಂದು ಘೋಷಿಸಲಾಗಿದೆ. (ಬೀದರ್, ದಕ್ಷಿಣ ಕನ್ನಡ, ಗುಲ್ಬರ್ಗಾ) ಈ ಜಿಲ್ಲೆಗಳಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಾಗಿರುವ ಕಾರಣ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳಾಗಿದ್ದು, ಗುಲ್ಬರ್ಗಾ ಜಿಲ್ಲೆಯು 2 ಕಂದಾಯ ಜಿಲ್ಲೆಗಳಾಗಿ 2009–10 ರಲ್ಲಿ ವಿಂಗಡಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಠ ಜಾತಿ ಸಮುದಾಯ ಹೆಚ್ಚಾಗಿರುವುದರಿಂದ ಅದು ಎಸ್.ಎಫ್.ಡಿ (ವಿಶೇಷ ಆಧ್ಯತಾ ಜಿಲ್ಲೆ ) ಎಂದು ಪರಿಗಣಿಸಲಾಗಿದೆ.

ನಮ್ಮ ರಾಜ್ಯದಲ್ಲಿ ಒಟ್ಟು 7 ಜಿಲ್ಲೆಗಳನ್ನು ವಿಶೇಷ ಆಧ್ಯತಾ ಜಿಲ್ಲೆಗಳೆಂದು ಪರಿಗಣಿಸಲಾಗಿದೆ.

| A | B | C | | D | | |
|---|---|---|---|---|---|---|
| **(PS UPS) Ratio >3:1)** | **ACR GAP** | **OOSC> 20,000** | **Retention Rate below 60%** | **SC (25% and above)** | **PMO's 121 Minority districts** | **Muslim concentration (20% and above)** |
| Chikkaballapur | Nil | Nil | Bangalore rural | Kolar | Bidar, Dakshina kannada Gulbarga Yadgir | D.K |
| 1 | - | - | 1 | 1 | 4 | 1 |

- ಈ ವಿಶೇಷ ಆದ್ಯತಾ ಜಿಲ್ಲೆಗಳನ್ನು ಇತರೆ ಜಿಲ್ಲೆಗಳ ಮಟ್ಟಕ್ಕೆ ಉನ್ನತೀಕರಸುವ ನಿಟ್ಟಿನಲ್ಲಿ ಈ ಜಿಲ್ಲೆಗಳಿಗೆ ವಿಶೇಷ ಆಧ್ಯತೆಯನ್ನು ನೀಡಬೇಕಾಗಿದೆ ಆದುದ್ದರಿಂದ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಎಲ್ಲಾ ಕಾರ್ಯತಂತ್ರಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಚಿಸಿದೆ.

2009-10 (in percentages)

| Social Category 1 to 10 | Boys | Girls | Total |
|---|---|---|---|
| Scheduled Caste | 18.81 (18.94) | 18.59 (18.70) | 18.70 (18.82) |
| Scheduled Tribes | 7.73 (7.79) | 7.63 (7.64) | 7.69 (7.72) |
| General | 22.05 (23.15) | 20.89 (22.19) | 21.49 (22.69) |
| O B Cs | 35.16 | 35.36 | 35.26 |
| Muslims | 13.90 (13.33) | 15.10 (14.37) | 14.48 (13.83) |
| Other Minorities | 2.21 (2.74) | 2.28 (2.77) | 2.24 (2.75) |

Note : (1) Figures in brackets are data of 2008-09

2009-10 (in percentages)

| Social Category 1 to 8 | Boys | Girls | Total |
|---|---|---|---|
| O B Cs | 35.63 | 35.74 | 35.59 |
| Muslims | 14.45 | 15.54 | 14.97 |
| Other Minorities | 2.12 | 2.19 | 2.15 |

- Justice Sachar Committee ಹಾಗೂ ಡೈಸ್ ವರದಿಯಂತೆ ಅಲ್ಪಸಂಖ್ಯಾತ ಗುಂಪಿನ ಮುಸ್ಲಿಂ ಬಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯನ್ನು ತೊರೆಯುತ್ತಿರುವುದು ಮತ್ತು ಬಾಲ ಕಾರ್ಮಿಕರಾಗುತ್ತಿದ್ದಾರೆ ಎಂದು ವರದಿ ಮಾಡಿದೆ. ಈ ಅಂಶದ ಬಗ್ಗೆ ಹೆಚ್ಚಿನ ಗಮನ ಹರಿಸಿ ಮುಸ್ಲಿಂ ಬಾಲಕರು ಶಾಲೆಯನ್ನು ತೊರೆಯದ ಹಾಗೆ ಮತ್ತು ಬಾಲ ಕಾರ್ಮಿಕರಾಗದಿರುವ ಹಾಗೆ ಅವರನ್ನು ಶಾಲೆಯತ್ತ ಆಕರ್ಷಿಸಲು ಎಸ್.ಎಸ್.ಎ ಕಾರ್ಯತಂತ್ರದೊಂದಿಗೆ ವಿಶೇಷ ಆದ್ಯತೆಯನ್ನು ನೀಡುವುದು. ಈ ನಿಟ್ಟಿನಲ್ಲಿ ವಿಶೇಷ ದಾಖಲಾತಿ ಆಂದೋಲನ, ಸಮುದಾಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಸಮೂಹ ಮಾಧ್ಯಮದ ಮೂಲಕ ಈ ಮೇಲಿನ ಅಂಶಗಳನ್ನು ಆರ್.ಟಿ.ಇ, ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು.
- ಜಾಗೃತಿ ಶಿಬಿರಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಪರಿಶಿಷ್ಠ ಜಾತಿ / ಪರಿಶಿಷ್ಠ ವರ್ಗ/ ಅಲ್ಪಸಂಖ್ಯಾತ ಮುಖಂಡರುಗಳನ್ನು ಪಾಲ್ಗೊಳ್ಳುವಂತೆ ಮಾಡುವುದು.
- ಶಾಲೆಯನ್ನು ತೊರೆದಂತಹ ಮುಸ್ಲಿಂ ಮಕ್ಕಳು ಪುನ: ಶಾಲೆಗೆ ಸೇರಿ, ನಿರಂತರವಾಗಿ ಶಾಲೆಗೆ ಹಾಜರಾಗಿ ಬಿ+ ಶ್ರೇಣಿ ಪಡೆದಂತಹ ಮಕ್ಕಳಿಗೆ ವಿಶೇಷ ಪ್ರೋತ್ಸಾಹ ಧನವನ್ನು ಯು.ಡಿ.ಸಿ ಅಡಿಯಲ್ಲಿ ನೀಡುವುದು.
- ಬಡತನ ರೇಖೆಗಿಂತ ಕೆಳಗಿರುವ ಮಕ್ಕಳನ್ನು ಉನ್ನತ ಮಟ್ಟದ ಕುಟುಂಬಗಳು ದತ್ತು ಪಡೆಯಲು ಪ್ರೋತ್ಸಾಹಿಸುವುದು.
- ಅಲ್ಪಸಂಖ್ಯಾತ ಕಾರ್ಯತಂತ್ರದಡಿಯಲ್ಲಿ ಮಂಜೂರಾಗಿರುವ ಆವಿಷ್ಕೃತ ಚಟುವಟಿಕೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಸಂಪೂರ್ಣ ಅನುದಾನವನ್ನು ವಿನಿಯೋಗಿಸಿ ಈ ಮಕ್ಕಳನ್ನು ಉನ್ನತ ಮಟ್ಟಕ್ಕೆ ತರುವಲ್ಲಿ ಕ್ರಮವಹಿಸುವುದು.
- ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ **ಅನುಬಂಧ 1 ಹಾಗೂ ಅನುಬಂಧ 2** ರ ಮಾಹಿತಿಯನ್ನು ಪ್ರತಿ ತಿಂಗಳು 05 ತಾರೀಖಿನ ಒಳಗಾಗಿ ಈ ಕಛೇರಿಗೆ ಸಲ್ಲಿಸುವುದು. ನಂತರ ಕ್ರೋಢೀಕರಿಸಿ 10ರ ಒಳಗಾಗಿ ಎಂ.ಹೆಚ್.ಆರ್.ಡಿ ಗೆ ಸಲ್ಲಿಸಲಾಗುವುದು.

| ಅನುಬಂಧ | ಸಲ್ಲಿಸುವ ದಿನಾಂಕ | ಕ್ರೋಢೀಕರಿಸಿ ಎಂ.ಹೆಚ್.ಆರ್.ಡಿ ಗೆ ಸಲ್ಲಿಸುವ ದಿನಾಂಕ |
|---|---|---|
| 1 | ಪ್ರತಿ ತಿಂಗಳ 5ನೇ ತಾರೀಖಿನೊಳಗೆ | ಪ್ರತಿ ತಿಂಗಳ 10ನೇ ತಾರೀಖಿನೊಳಗೆ |
| 2 | ಪ್ರತಿ ತಿಂಗಳ 10ನೇ ತಾರೀಖಿನೊಳಗೆ | ಪ್ರತಿ ತಿಂಗಳ 15ನೇ ತಾರೀಖಿನೊಳಗೆ |

- ಇಲಾಖೆಯ ವಿವಿಧ ಶಾಖೆಗಳಿಗೆ ಮಾಹಿತಿಯನ್ನು ನೀಡುವಾಗ ಮಾಹಿತಿ ವ್ಯತ್ಯಾಸವಿರದಂತೆ ನೋಡಿಕೊಳ್ಳುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಪ್ರತಿ

1. ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಬೀದರ್, ದಕ್ಷಿಣ ಕನ್ನಡ, ಗುಲ್ಬರ್ಗಾ, ಯಾದಗಿರಿ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ.
2. ಉಪನಿರ್ದೇಶಕರು(ಅಭಿವೃದ್ಧಿ), ಬೀದರ್, ದಕ್ಷಿಣ ಕನ್ನಡ, ಗುಲ್ಬರ್ಗಾ, ಯಾದಗಿರಿ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ.
3. ಜಿಲ್ಲೆಗೆ ಸಂಬಂದಿಸಿದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಬೀದರ್, ದಕ್ಷಿಣ ಕನ್ನಡ, ಗುಲ್ಬರ್ಗಾ, ಯಾದಗಿರಿ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ.

ಮಾಹಿತಿಗಾಗಿ:

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ ಇವರಿಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಿದೆ.
3. ಅಪರ ಆಯುಕ್ತರು, ಸಾ.ಶಿ.ಇ. ಗುಲ್ಬರ್ಗಾ ಮತ್ತು ಧಾರವಾಡ